ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY

Azadi Ka Amrit Mahotsav

NAAC Accredited with "A" Grade 2022
ಸಿಂಡಿಕೇಟ ವಿಭಾಗ

ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-67/2025-26/ 168 ದಿನಾಂಕ: 23 MAR 2026

**:: ಸಿಂಡಿಕೇಟ ಸಭೆಯ ನಡಾವಳಿಗಳು ::**

ಕರ್ನಾಟಕ ವಿಶ್ವವಿದ್ಯಾಲಯದ 2025-26ನೇ ಸಾಲಿನ 7ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು **ದಿನಾಂಕ 5 ಮಾರ್ಚ್, 2026 ರಂದು ಮುಂಜಾನೆ 11:00 ಗಂಟೆಗೆ** ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ಸಿಂಡಿಕೇಟ ಸಭೆಗೆ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1) | ಪ್ರೊ. ಐರಾನಿ ಮೊಹಮ್ಮದ್ ಖಾನ್, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2) | ಡಾ. ಎಮ್. ಎಚ್. ಅಗಡಿ, ಡೀನರು | ಸದಸ್ಯರು |
| 3) | ಶ್ರೀಮತಿ. ಅಂಜನಾ ಎಸ್. ಬಸನಗೌಡರ, ಹುಬ್ಬಳ್ಳಿ | ಸದಸ್ಯರು |
| 4) | ಶ್ರೀಮತಿ. ರತ್ನಾ ಪಾಟೀಲ, ಧಾರವಾಡ | ಸದಸ್ಯರು |
| 5) | ಡಾ.(ಶ್ರೀಮತಿ). ಎನ್. ಸಿ. ಪಾಟೀಲ, ಪ್ರಾಚಾರ್ಯರು, ಧಾರವಾಡ | ಸದಸ್ಯರು |
| 6) | ಡಾ. ಬಿ. ಬಿ. ಹೊಳಗುಂದಿ, ಪ್ರಾಚಾರ್ಯರು, ಗದಗ | ಸದಸ್ಯರು |
| 7) | ಡಾ. ಬಿ. ಎಲ್. ಗುಂಡೂರ, ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| 8) | ಡಾ. ಎಸ್. ವಿ. ವಸ್ತ್ರದ, ಪ್ರಾಚಾರ್ಯರು, ಅಂಕೋಲಾ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 9) | ಡಾ(ಶ್ರೀಮತಿ). ಎಚ್. ಎಸ್. ಅನುಪಮ, ಹೊನ್ನಾವರ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 10) | ಶ್ರೀ. ಮಹೇಶ ವಾಯ್. ಹುಲೇನ್ನವರ, ಧಾರವಾಡ | ಸದಸ್ಯರು |
| 11) | ಶ್ರೀ. ರಾಬರ್ಟ ದದ್ದಾಪುರಿ, ಧಾರವಾಡ | ಸದಸ್ಯರು |
| 12) | ಡಾ. ಬಸವರಾಜ ಗೊರವರ, ಕುಂದಗೋಳ | ಸದಸ್ಯರು |
| 13) | ಶ್ರೀ. ಶ್ಯಾಮ್ ಮಲ್ಲನಗೌಡರ, ಧಾರವಾಡ | ಸದಸ್ಯರು |
| 14) | ಡಾ. ಎನ್. ವಾಯ್. ಮಟ್ಟಿಹಾಳ, ಕುಲಸಚಿವರು(ಮೌಲ್ಯಮಾಪನ), ಕ.ವಿ.ವಿ. ಧಾರವಾಡ | ಸದಸ್ಯರು |
| 15) | ಶ್ರೀ. ಪ್ರದೀಪಕುಮಾರ, ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ | ವಿಶೇಷ ಆಹ್ವಾನಿತರು |
| 16) | ಡಾ. ಶಂಕರ ವಣಿಕ್ಯಾಳ, ಕೆಎಎಸ್, ಕುಲಸಚಿವರು(ಆಡಳಿತ). ಕ.ವಿ.ವಿ. ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಸದಸ್ಯರುಗಳು ಇರುವುದನ್ನು ಖಚಿತಪಡಿಸಿಕೊಂಡು ಅಂದರೆ 16 ಜನ ಸದಸ್ಯರುಗಳು (02 ಸದಸ್ಯರು ಆನ್‌ಲೈನ್ ಮತ್ತು 14 ಸದಸ್ಯರು ಖುದ್ದು ಹಾಜರಿರುವುದನ್ನು) ಖಚಿತಪಡಿಸಿಕೊಂಡು ಮುಂಜಾನೆ 11:00 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಸಭೆಯ ಅಧ್ಯಕ್ಷರಾದ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

-
-
-
-
-

ಕುಲಸಚಿವರು



ಕುಲಪತಿಗಳು

## ದಿನಾಂಕ 05.03.2026 ರಂದು ಜರುಗಿದ ಸಾಧಾರಣ ಸಿಂಡಿಕೇಟ ಸಭೆ

**ಮಾನ್ಯ ಕುಲಪತಿಗಳಿಂದ ಪ್ರಾರಂಭ:**

**ಕರ್ನಾಟಕ ವಿಶ್ವವಿದ್ಯಾಲಯದ ಸಂಯೋಜಿತ ಮಹಾವಿದ್ಯಾಲಯದ ಪ್ರಾಚಾರ್ಯರನ್ನು ಸದಸ್ಯರೆಂದು ಸ್ವಾಗತಿಸುವುದು.**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಎಫ್) ರ ಅಡಿಯಲ್ಲಿ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರ ಜೇಷ್ಠತೆಯ ಅನುಗುಣವಾಗಿ ಡಾ. ಎಸ್. ವಿ. ವಸ್ತ್ರದ, ಪ್ರಾಚಾರ್ಯರು, ಗೋಖಲೆ ಸೆಂಟೆನರಿ ಮಹಾವಿದ್ಯಾಲಯ, ಅಂಕೋಲಾ ಇವರನ್ನು ಸಿಂಡಿಕೇಟ ಸಭೆಗೆ ಸದಸ್ಯರೆಂದು ನಾಮನಿರ್ದೇಶನ ಮಾಡಲಾಗಿದ್ದು ಇವರಿಗೆ ಸಿಂಡಿಕೇಟ ಸಭೆಗೆ ತುಂಬು ಹೃದಯದಿಂದ ಸ್ವಾಗತ ಕೋರಲಾಯಿತು.

**ಸಿಂಡಿಕೇಟ ಸದಸ್ಯರ ಸದಸ್ಯತ್ವದ ಅವಧಿ ಕೊನೆಗೊಂಡ ಪ್ರಯುಕ್ತ ವಂದನೆ.**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಎಫ್) ರ ಅಡಿಯಲ್ಲಿ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರ ಜೇಷ್ಠತೆಯ ಅನುಸಾರ ಸಿಂಡಿಕೇಟ ಸದಸ್ಯರೆಂದು ನಾಮನಿರ್ದೇಶನಗೊಂಡಿದ್ದ **ಡಾ. ಎಲ್. ಎಲ್. ಮುಳ್ಳಳ್ಳಿ, ಪ್ರಾಚಾರ್ಯರು, ಕೆಎಲ್ಇ ಶಿಕ್ಷಣ ಮಹಾವಿದ್ಯಾಲಯ, ವಿದ್ಯಾನಗರ, ಹುಬ್ಬಳ್ಳಿ** ಇವರು ಸೇವೆಯಿಂದ ನಿವೃತ್ತಿ ಹೊಂದಿದ ಪ್ರಯುಕ್ತ ಅವರ ಸಿಂಡಿಕೇಟ ಸದಸ್ಯತ್ವವು ದಿನಾಂಕ: **28.02.2028** ರಂದು ಕೊನೆಗೊಂಡಿದ್ದು, ವಿಶ್ವವಿದ್ಯಾಲಯದ ಹಾಗೂ ಸಿಂಡಿಕೇಟ ಸದಸ್ಯರುಗಳ ಪರವಾಗಿ ವಿಶ್ವವಿದ್ಯಾಲಯದ ಅಭಿವೃಧ್ಧಿಗಾಗಿ ನೀಡಿದ ಅಮೂಲ್ಯ ಸಲಹೆ, ಸೂಚನೆ ಹಾಗೂ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

-
-
-
-
-
-
-
-
-
-
-
-
-

ಕುಲಸಚಿವರು



ಕುಲಪತಿಗಳು

| | | |
|---|---|---|
| 1) | ವಿಷಯ | **A)** ದಿನಾಂಕ 05.11.2025 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿ |
| | **ನಿರ್ಣಯ** | ದಿನಾಂಕ 05.11.2025 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು. |
| | ವಿಷಯ | **B)** ದಿನಾಂಕ 23.12.2025 ರ ವಿಶೇಷ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿ. |
| | **ನಿರ್ಣಯ** | ದಿನಾಂಕ 23.12.2025 ರ ವಿಶೇಷ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು. |
| | ವಿಷಯ | **C)** ದಿನಾಂಕ 30.12.2025 ರ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು. |
| | **ನಿರ್ಣಯ** | ದಿನಾಂಕ 30.12.2025 ರ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ಯಥಾವತ್ತಾಗಿ ದೃಢೀಕರಿಸಿತು. |
| | ವಿಷಯ | **D)** ದಿನಾಂಕ 17.01.2026 ರ ವಿಶೇಷ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು. |
| | **ನಿರ್ಣಯ** | ದಿನಾಂಕ 17.01.2026 ರ ವಿಶೇಷ ಸಿಂಡಿಕೇಟ ಸಭೆಯ ನಡುವಳಿಗಳನ್ನು ಯಥಾವತ್ತಾಗಿ ದೃಢೀಕರಿಸಿತು. |
| | ವಿಷಯ | **E)** ದಿನಾಂಕ 14.02.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು. |
| | **ನಿರ್ಣಯ** | ದಿನಾಂಕ 14.02.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವಾಗ ನಿರ್ಣಯ ಸಂಖ್ಯೆ: 16ನ್ನು ಈ ಕೆಳಗಿನಂತೆ ತಿದ್ದುಪಡೆ ಮಾಡಲಾಯಿತು. ಮುಂದುವರೆದು, ಉಳಿದ ಎಲ್ಲ ನಿರ್ಣಯಗಳನ್ನು ಯಥಾವತ್ತಾಗಿ ದೃಢೀಕರಿಸಿತು. |

| **ನಿರ್ಣಯ ಸಂಖ್ಯೆ** | **ದಾಖಲಾದ ನಿರ್ಣಯ** | **ತಿದ್ದುಪಡೆಗೊಳಿಸಿದ ನಿರ್ಣಯ** |
|---|---|---|
| 16 | ಸುಧಾ ಯುಗಾದಿ-2026 ಸಾಹಿತ್ಯಕ ವಿಜಯವಾಣಿ ವಿಶೇಷ ಪುರವಣಿಗೆ ಜಾಹೀರಾತನ್ನು ರೂ.15,000/-ಗಳಿಗೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. | ಸುಧಾ ಯುಗಾದಿ ವಿಶೇಷಾಂಕ-2026 ಜಾಹೀರಾತನ್ನು ರೂ.15,000/-ಗಳಿಗೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | | |
|---|---|---|
| 2) | ವಿಷಯ | ಡಾ. (ಶ್ರೀಮತಿ) ನಿರುಪಮಾ ಜೆ.ಎಮ್., ಡಾ. (ಶೀಮತಿ) ಜ್ಯೋತಿ ದೊಡಮನಿ ಮತ್ತು ಡಾ. ಹರ್ಷಾ ಡಿ. ನೀಲಗುಂದ ಇವರಿಗೆ ದಿನಾಂಕ 16.11.2023 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಪ್ರಕಾರ ಯುಜಿಸಿ ಸಿಎಎಸ್ ನಿಯಮಾವಳಿಗಳ ಅನ್ವಯ Academic Level 11 ರಿಂದ 12 ಕ್ಕೆ ಪದೋನ್ನತಿ ನೀಡುವ ವಿಷಯವನ್ನು ಪರಿಶೀಲಿಸುವ ಕುರಿತು. |
| | **ನಿರ್ಣಯ** | ಡಾ. (ಶ್ರೀಮತಿ) ನಿರುಪಮಾ ಜೆ.ಎಮ್., ಡಾ. (ಶೀಮತಿ) ಜ್ಯೋತಿ ದೊಡಮನಿ ಮತ್ತು ಡಾ. ಹರ್ಷಾ ಡಿ. ನೀಲಗುಂದ ಇವರಿಗೆ ದಿನಾಂಕ 16.11.2023 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಪ್ರಕಾರ ಯುಜಿಸಿ ಸಿಎಎಸ್ ನಿಯಮಾವಳಿಗಳ ಅನ್ವಯ Academic Level 11 ರಿಂದ 12 ಕ್ಕೆ ಪದೋನ್ನತಿ ನೀಡುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಸದರಿಯವರ ನೇಮಕಾತಿ ಹೊಂದಿದ ದಿನಾಂಕದಿಂದ ಇಲ್ಲಿಯವರೆಗೆ ಸೇವಾ ದಾಖಲೆಗಳನ್ನು ವಿವರವಾದ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯು ಅನುಮೋದಿಸಿತು. |



ಕುಲಸಚಿವರು

ಕುಲಪತಿಗಳು

| | | |
|---|---|---|
| 3) | ವಿಷಯ | ಶ್ರೀ. ಗಿರೀಶ ಜೋಶಿ, ಸ್ಥಾನಿಕ ಅಭಿಯಂತರರು, ಕಟ್ಟಡ ವಿಭಾಗ, ಕವಿವಿ, ಧಾರವಾಡ ಇವರು ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿದ ಲಿಖಿತ ವಿವರಣೆಯನ್ನು ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸುವ ಕುರಿತು. |
| | ನಿರ್ಣಯ | ಶ್ರೀ. ಗಿರೀಶ ಜೋಶಿ, ಸ್ಥಾನಿಕ ಅಭಿಯಂತರರು, ಕಟ್ಟಡ ವಿಭಾಗ, ಕವಿವಿ, ಧಾರವಾಡ ಇವರು ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿದ ಲಿಖಿತ ವಿವರಣೆಯನ್ನು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಸದರಿಯವರನ್ನು ವಿಶ್ವವಿದ್ಯಾಲಯದಿಂದ ಬಿಡುಗಡೆಗೊಳಿಸುವ ಕುರಿತು ಕಾನೂನು ಅಭಿಪ್ರಾಯವನ್ನು ಪಡೆದು ಮುಂದಿನ ಕ್ರಮವನ್ನು ಜರುಗಿಸಲು ಸಭೆಯು ಅನುಮೋದಿಸಿತು. |
| 4) | ವಿಷಯ | ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ನೌಕರರಿಗೆ ಮಂಜೂರಾದ ನಿವೃತ್ತಿ ಸೌಲಭ್ಯವಾದ ಪರಿವರ್ತಿತ ಪಿಂಚಣಿಯನ್ನು ಪ್ರತಿ ತಿಂಗಳ ಪಿಂಚಣಿಯಲ್ಲಿ ಕಟಾವು ಮಾಡುತ್ತಿರುವ ಕುರಿತಂತೆ ಮಾನ್ಯ ಉಚ್ಚನ್ಯಾಯಾಲಯವು ನೀಡಿರುವ ಆದೇಶವನ್ನು ಸಭೆಯು ಪರಿಶೀಲಿಸಿ ಕ್ರಮ ಜರುಗಿಸಲು ಪರಿಶೀಲಿಸುವ ಕುರಿತು. |
| | ನಿರ್ಣಯ | ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ನೌಕರರಿಗೆ ಮಂಜೂರಾದ ನಿವೃತ್ತಿ ಸೌಲಭ್ಯವಾದ ಪರಿವರ್ತಿತ ಪಿಂಚಣಿಯನ್ನು ಪ್ರತಿ ತಿಂಗಳ ಪಿಂಚಣಿಯಲ್ಲಿ ಕಟಾವು ಮಾಡುತ್ತಿರುವ ಬಗ್ಗೆ ಮಾನ್ಯ ಉಚ್ಚನ್ಯಾಯಾಲಯವು ನೀಡಿರುವ ಆದೇಶದಂತೆ ದಿನಾಂಕ: 26.02.2026 ರಂತೆ 15 ವರ್ಷ ಕಟಾವಣೆ ಮುಂದುವರೆಸುವುದು. ಈ ಮಾಹಿತಿಯನ್ನು ಅರ್ಜಿದಾರರಿಗೆ ತಿಳಿಸುವುದು. ಹಾಗೂ ಸದರಿ ಮಾಹಿತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು. |
| 5) | ವಿಷಯ | ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಮುಖ್ಯಸ್ಥರನ್ನು ನೇಮಕ ಮಾಡಿ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು. |
| | ನಿರ್ಣಯ | ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಮುಖ್ಯಸ್ಥರನ್ನು ನೇಮಕ ಮಾಡಿ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ದೃಢೀಕರಿಸಿತು. |
| 6) | ವಿಷಯ | ಕ.ವಿ.ವಿ.ಮುದ್ರಣಾಲಯದಲ್ಲಿ ಸ್ನಾತಕ/ ಸ್ನಾತಕೋತ್ತರ ಪರೀಕ್ಷೆಗಳಿಗೆ ಬೇಕಾಗಿರುವ ಉತ್ತರಪತ್ರಿಕೆಗಳು, **OMR Sheets** ಹಾಗೂ ಪ್ರಸಾರಾಂಗ, ವಿವಿಧ ಪೀಠಗಳ ಪ್ರಕಟಣೆಗಳನ್ನು ಮತ್ತು ವಿಶ್ವವಿದ್ಯಾಲಯದ ದೈನಂದಿನ ಮುದ್ರಣ ಕೆಲಸಗಳನ್ನು ಮುದ್ರಿಸಿ ಪೂರೈಸಲು **e-Procurement/e-Tender** ಮುಖಾಂತರ ವಿವಿಧ ನಮೂನೆ ಅಳತೆಯ ಪೇಪರ ಮತ್ತು ಕಾರ್ಡ್ಸ್‌ಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು. |
| | ನಿರ್ಣಯ | ಕ.ವಿ.ವಿ.ಮುದ್ರಣಾಲಯದಲ್ಲಿ ಸ್ನಾತಕ/ ಸ್ನಾತಕೋತ್ತರ ಪರೀಕ್ಷೆಗಳಿಗೆ ಬೇಕಾಗಿರುವ ಉತ್ತರಪತ್ರಿಕೆಗಳು, **OMR Sheets** ಹಾಗೂ ಪ್ರಸಾರಾಂಗ, ವಿವಿಧ ಪೀಠಗಳ ಪ್ರಕಟಣೆಗಳನ್ನು ಮತ್ತು ವಿಶ್ವವಿದ್ಯಾಲಯದ ದೈನಂದಿನ ಮುದ್ರಣ ಕೆಲಸಗಳನ್ನು ಮುದ್ರಿಸಿ ಪೂರೈಸಲು **e-Procurement/e-Tender** ಮುಖಾಂತರ ವಿವಿಧ ನಮೂನೆ ಅಳತೆಯ ಪೇಪರ ಮತ್ತು ಕಾರ್ಡ್ಸ್‌ಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಮೊದಲು ಸಲಹಾ ಸಮಿತಿ ಸಭೆಯನ್ನು ಕರೆದು ಇದರ ಬಗ್ಗೆ ವರದಿ ಬಂದ ನಂತರ ಮುಂದಿನ ಕ್ರಮವಹಿಸಲು ಅನುಮೋದಿಸಿತು. |
| 7) | ವಿಷಯ | Consideration of CAS applications for promotion of Dr(Smt). Sridevi P.G., Dr. J.S. Doddamani and Dr. Geeta Chavan. |
| | ನಿರ್ಣಯ | Syndicate resolved to maintain the status quo for consideration of CAS applications for promotion of Dr(Smt). Sridevi P.G., Dr. J.S. Doddamani and Dr. Geeta Chavan. |
| | | **ಅಧ್ಯಕ್ಷರ ಅಪ್ಪಣೆಮೇರೆಗೆ ಬಂದ ವಿಷಯಗಳ ಪಟ್ಟಿ** |
| 8) | ವಿಷಯ | ಡಾ. ಛಾಯಾ ಘಡಕೆ ಇವರ ದೂರಿನ ವಿಷಯವಾಗಿ ವಿಚಾರಣಾ ಸಮಿತಿಯವರು ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಪರಿಶೀಲಿಸುವ ಕುರಿತು. |
| | ನಿರ್ಣಯ | ಡಾ. ಛಾಯಾ ಘಡಕೆ ಇವರ ದೂರಿನ ವಿಷಯವಾಗಿ ವಿಚಾರಣಾ ಸಮಿತಿಯವರು ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಸದರಿ ಸಮಿತಿ ನೀಡಿದ ವರದಿಯನ್ನು ICC (Internal Complaint Committe) ಇವರಿಗೆ ಮಂಡಿಸಿ ವರದಿಯನ್ನು ನೀಡಲು ಸಭೆಯು |



ಕುಲಸಚಿವರು

ಕುಲಪತಿಗಳು

| | | |
|---|---|---|
| | | ಅನುಮೋದಿಸಿತು. |
| 9) | ವಿಷಯ | ಪರಿಷ್ಕೃತ 7ನೇ ವೇತನ ಶ್ರೇಣಿಯ ದಿನಾಂಕ: 01-01-2016 ರಿಂದ 31-03-2019ರ ವರೆಗಿನ ಹಿಂಬಾಕಿ ಪಾವತಿಸುವಾಗ ಪರಿಷ್ಕೃತ 6ನೇ ವೇತನ ಶ್ರೇಣಿಯಲ್ಲಿ ಹೆಚ್ಚುವರಿಯಾಗಿ ಪಾವತಿಸಿದ ತುಟ್ಟಿಭತ್ಯೆಯನ್ನು ವಸೂಲಿಸುವ ಕುರಿತು. |
| | **ನಿರ್ಣಯ** | ಪರಿಷ್ಕೃತ 7ನೇ ವೇತನ ಶ್ರೇಣಿಯ ದಿನಾಂಕ: 01-01-2016 ರಿಂದ 31-03-2019ರ ವರೆಗಿನ ಹಿಂಬಾಕಿ ಪಾವತಿಸುವಾಗ ಪರಿಷ್ಕೃತ 6ನೇ ವೇತನ ಶ್ರೇಣಿಯಲ್ಲಿ ಹೆಚ್ಚುವರಿಯಾಗಿ ಪಾವತಿಸಿದ ತುಟ್ಟಿಭತ್ಯೆಯನ್ನು ವಸೂಲಿಸುವ ಕುರಿತು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಈಗಾಗಲೇ ಪಾವತಿಸಿದ ಹೆಚ್ಚುವರಿ ಮೊತ್ತವನ್ನು ವಸೂಲಿ ಮಾಡುವಂತೆ ಸೂಚಿಸಿ ಸಂಬಂಧಪಟ್ಟ ಸಿಬ್ಬಂದಿಗಳಿಗೆ ಸೂಚನಾ ಪತ್ರವನ್ನು ನೀಡಿ ಸರ್ಕಾರಕ್ಕೆ ಪತ್ರವನ್ನು ಬರೆಯಲು ಅನುಮೋದಿಸಿತು. |
| 10) | ವಿಷಯ | ಮುದ್ರಣಾಲಯದಲ್ಲಿರುವ **HMT 36R Double Demy Offset Printing Machine & HMT SOM 125 Single Demy** ಮುದ್ರಣ ಯಂತ್ರಗಳನ್ನು **buyback** ಮಾಡಿ ಹೊಸ **Single Colour Sheetfed Single Dummy Offset Printing Machine 10** ದಿನಗಳ ಅಲ್ಪಾವಧಿ ಟೆಂಡರ ಮುಂಖಾತರ ಖರೀದಿಸುವ ವಿಷಯವಾಗಿ ಸಿಂಡಿಕೇಟ ಸಭೆಯಲ್ಲಿ ಕಾರ್ಯಸೂಚಿಯನ್ನು ಅನುಮೋದಿಸುವ ಕುರಿತು. |
| | **ನಿರ್ಣಯ** | ಮುದ್ರಣಾಲಯದಲ್ಲಿರುವ **HMT 36R Double Demy Offset Printing Machine & HMT SOM 125 Single Demy** ಮುದ್ರಣ ಯಂತ್ರಗಳನ್ನು **buyback** ಮಾಡಿ ಹೊಸ **Single Colour Sheetfed Single Dummy Offset Printing Machine 10** ದಿನಗಳ ಅಲ್ಪಾವಧಿ ಟೆಂಡರ ಮುಂಖಾತರ ಖರೀದಿಸುವ ವಿಷಯವಾಗಿ ಸಿಂಡಿಕೇಟ ಸಭೆಯು ಪರಿಶೀಲಿಸಿ ಮೊದಲು ಸಲಹಾ ಸಮಿತಿ ಸಭೆಯನ್ನು ಕರೆದು ಇದರ ಬಗ್ಗೆ ವರದಿ ಬಂದ ನಂತರ ಮುಂದಿನ ಕ್ರಮವಹಿಸಲು ಅನುಮೋದಿಸಿತು. |
| 11) | ವಿಷಯ | ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗಾಗಿ ಡಿಜಿಟಲ್ ಅಕಾಡೆಮಿಕ್ ಪ್ಲಾಟ್‌ಫಾರ್ಮ್ (Digital Academic Platform) ಅಳವಡಿಸುವ ವಿಷಯದ ಪ್ರಸ್ತಾವನೆಯನ್ನು ಪರಿಶೀಲಿಸುವ ಕುರಿತು. |
| | **ನಿರ್ಣಯ** | ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗಾಗಿ ಡಿಜಿಟಲ್ ಅಕಾಡೆಮಿಕ್ ಪ್ಲಾಟ್‌ಫಾರ್ಮ್ (Digital Academic Platform) ಅಳವಡಿಸುವ ವಿಷಯದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಸದರಿ ಪ್ರಸ್ತಾವನೆಯ ಇನ್ನು ಹೆಚ್ಚಿನ ಮಾಹಿತಿಯನ್ನು ತಿಳಿಯಲು, ಎಲ್ಲ ಸಿಂಡಿಕೇಟ್ ಸದಸ್ಯರ ಮುಂದೆ (Digital Academic Platform) ಕುರಿತು Demonstration ಮಾಡಲು ಸಭೆಯು ಅನುಮೋದಿಸಿತು. |
| 12) | ವಿಷಯ | ಡಾ.ಜಿ.ಎಸ್.ಮುಳಗುಂದ, ಉದ್ಯಾನಾಧಿಕಾರಿ, ಉದ್ಯಾನ ಇಲಾಖೆ, ಕ.ವಿ.ವಿ. ಧಾರವಾಡ ಇವರು ಪ್ರಭಾರ ಭತ್ಯೆಯನ್ನು ಮಂಜೂರು ಮಾಡಲು ವಿನಂತಿಸಿರುವ ಪ್ರಸ್ತಾವನೆಯನ್ನು ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲಿಸುವ ಕುರಿತು |
| | **ನಿರ್ಣಯ** | ಡಾ.ಜಿ.ಎಸ್.ಮುಳಗುಂದ, ಉದ್ಯಾನಾಧಿಕಾರಿ, ಉದ್ಯಾನ ಇಲಾಖೆ, ಕ.ವಿ.ವಿ. ಧಾರವಾಡ ಇವರು ಪ್ರಭಾರ ಭತ್ಯೆಯನ್ನು ಮಂಜೂರು ಮಾಡಲು ವಿನಂತಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ನಿಯಮಾನುಸಾರ ಪ್ರಭಾರ ಭತ್ತೆಯನ್ನು ಮಂಜೂರು ಮಾಡುವ ಕುರಿತಂತೆ ಪರಿಶೀಲಿಸಲು ಈ ಕೆಳಗಿಂತೆ ಸಮಿತಿಯನ್ನು ರಚಿಸಿ ವರದಿಯನ್ನು ನೀಡಲು ಸಭೆಯು ಅನುಮೋದಿಸಿತು. |

| **ಅ.ನಂ.** | **ಹುದ್ದೆ** | **ಪದನಾಮ** |
|---|---|---|
| 1) | ಕುಲಸಚಿವರು | ಅಧ್ಯಕ್ಷರು |
| 2) | ಹಣಕಾಸು ಅಧಿಕಾರಿಗಳು | ಸದಸ್ಯರು |
| 3) | ಉಪ ಕುಲಸಚಿವರು, ಸಿಆಸು ವಿಭಾಗ | ಸಂಚಾಲಕರು |

| | | |
|---|---|---|
| 13) | ವಿಷಯ | ಡಾ. ವ್ಹಿ.ಪಿ. ಸುಣಗಾರ, ಪೂರ್ಣಾವಧಿ ಅತಿಥಿ ಉಪನ್ಯಾಸಕರು, ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ಸಹಾಯಕ ಪ್ರಾಧ್ಯಾಪಕ (Assistant Professor) ಹುದ್ದೆಗೆ ಖಾಯಂಗೊಳಿಸುವಂತೆ ಇವರ ಮನವಿಯಂತೆ ಸಿಂಡಿಕೇಟ್ ಸಭೆಯಲ್ಲಿ ಪರಿಶೀಲಿಸುವ ಕುರಿತು. |



**ಕುಲಸಚಿವರು** **ಕುಲಪತಿಗಳು**

| | | |
|---|---|---|
| | **ನಿರ್ಣಯ** | ಡಾ. ವ್ಹಿ.ಪಿ. ಸುಣಗಾರ, ಪೂರ್ಣಾವಧಿ ಅತಿಥಿ ಉಪನ್ಯಾಸಕರು, ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ಸಹಾಯಕ ಪ್ರಾಧ್ಯಾಪಕ (Assistant Professor) ಹುದ್ದೆಗೆ ಖಾಯಂಗೊಳಿಸುವಂತೆ ಇವರ ಮನವಿಯಂತೆ ಸಿಂಡಿಕೇಟ್ ಸಭೆಯು ಪರಿಶೀಲಿಸಿ ಈಗಾಗಲೇ ಉಚ್ಚ ನ್ಯಾಯಾಲಯದ ಆದೇಶವನ್ನು ವರದಿಯೊಂದಿಗೆ ಸರ್ಕಾರಕ್ಕೆ ಪತ್ರ ಬರೆದು ನಿರ್ದೇಶನ ಕೋರಲು ನಿರ್ಣಯಿಸಿತು. |
| **14)** | ವಿಷಯ | ಡಾ. ಹೊನ್ನಪ್ಪಾ ಎಸ್., ಸಹ ಪ್ರಾಧ್ಯಾಪಕರು (ನಿವೃತ್ತ), ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ತಮ್ಮ ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕ ತಿದ್ದುಪಡಿಮಾಡಿರುವ ಪ್ರಕರಣದಲ್ಲಿ ಸದರಿಯವರ ಅಮಾನತ್ತಿನ ಅವಧಿಯನ್ನು ವೇತನ ರಹಿತ ರಜೆ ಎಂದು ಪರಿಗಣಿಸಬೇಕೆಂಬ ದಿನಾಂಕ: 22.10.2024ರ ಸಿಂಡಿಕೇಟ ನಿರ್ಣಯವನ್ನು ಮರುಪರಿಶೀಲಿಸಲು ಜಂಟಿ ನಿರ್ದೇಶಕರು, ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಹಾಗೂ ಡಾ. ಬಿ.ಎಲ್. ಗುಂಡೂರ, ಸಿಂಡಿಕೇಟ ಸದಸ್ಯರು ಇವರನ್ನು ಒಳಗೊಂಡ ಸಮಿತಿಯು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ವರದಿಯನ್ನು ಪರಿಶೀಲಿಸುವ ಕುರಿತು. |
| | **ನಿರ್ಣಯ** | ಡಾ. ಹೊನ್ನಪ್ಪಾ ಎಸ್., ಸಹ ಪ್ರಾಧ್ಯಾಪಕರು (ನಿವೃತ್ತ), ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ತಮ್ಮ ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕ ತಿದ್ದುಪಡಿಮಾಡಿರುವ ಪ್ರಕರಣದಲ್ಲಿ ಸದರಿಯವರ ಅಮಾನತ್ತಿನ ಅವಧಿಯನ್ನು ವೇತನ ರಹಿತ ರಜೆಯಂದು ಪರಿಗಣಿಸಬೇಕೆಂಬ ದಿನಾಂಕ: 22.10.2024ರ ಸಿಂಡಿಕೇಟ ನಿರ್ಣಯವನ್ನು ಮರುಪರಿಶೀಲಿಸಲು ಜಂಟಿ ನಿರ್ದೇಶಕರು, ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಹಾಗೂ ಡಾ. ಬಿ.ಎಲ್. ಗುಂಡೂರ, ಸಿಂಡಿಕೇಟ ಸದಸ್ಯರು ಇವರನ್ನು ಒಳಗೊಂಡ ಸಮಿತಿಯು ಮುಚ್ಚಿದ ಲಕೋಟೆಯನ್ನು ತೆರೆದು ಓದಲಾಗಿ ಅಮ್ಮಾನತ್ತಿನ ಅವಧಿಯ 215 ದಿನಗಳಲ್ಲಿ ಅವರ ಗಳಿಕೆ ರಜೆ ಖಾತೆಯಲ್ಲಿ ಲಭ್ಯವಿರುವ 47 ರಜೆಗಳನ್ನು ಖರ್ಚು ಹಾಕಿ ಬಾಕಿ ಉಳಿದ 168 ದಿನಗಳನ್ನು ವೇತನ ರಹಿತ ರಜೆಗಳೆಂದು ಪರಗಣಿಸಿ (LWP) ಈಗಾಗಲೇ ಪಾವತಿಸಿದ ಜೀವನಾಂಶ ಭತ್ಯೆಯನ್ನು (Subsitance Allowance) DCRG ಮೊತ್ತ ರೂ.20 ಲಕ್ಷಗಳಲ್ಲಿ ಕಡಿತಗೊಳಿಸಿ ಬಾಕಿ ಉಳಿದ ಮೊತ್ತವನ್ನು ಲೆಕ್ಕ ಪರಿಶೋಧಕರ ಆಕ್ಷೇಪಣೆ ತಿರುವಳಿಗೊಂಡ ನಂತರ ಡಾ. ಹೊನ್ನಪ್ಪ ಎಸ್. ಇವರಿಗೆ ಪಾವತಿಸಲು ಸಿಂಡಿಕೇಟ್ ಸಭೆ ನಿರ್ಣಯಿಸಿತು. |
| **15)** | ವಿಷಯ | Proposal submitted by Dr(Smt). N. C. Patil, Syndicate Member Requested to name the Department of Yoga Studies as Prof. Laxmankumar Sannellppanavar, Yoga Depratment, Karnatak University, Dharwad |
| | **ನಿರ್ಣಯ** | ಡಾ(ಶ್ರೀಮತಿ). ಎನ್. ಸಿ. ಪಾಟೀಲ, ಸಿಂಡಿಕೇಟ ಸದಸ್ಯರು ಇವರು ಸಲ್ಲಿಸಿದ ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿದ ಸಿಂಡಿಕೇಟ ಸಭೆಯು ಪ್ರೊ. ಲಕ್ಷಣಕುಮಾರ ಸಣ್ಣೇಲ್ಲಪ್ಪನವರ ಎಂದು ವಿಭಾಗದ ಹೆಸರು ಇಡುವ ಬದಲು, ಇವರ ಹೆಸರಲ್ಲಿ ಗೋಲ್ಡ್ ಮೇಡಲ್ ಸ್ಥಾಪಿಸಲು ಮತ್ತು ವಿಶೇಷ ಉಪನ್ಯಾಸ ನಡೆಸಲು ರೂ.3 ಲಕ್ಷಗಳನ್ನು ಠೇವಣಿ ಇರಿಸಲು ಸಿಂಡಿಕೇಟ ಸಭೆಯು ಅನುಮೋದಿಸಿತು. |
| **16)** | ವಿಷಯ | ಡಾ(ಶ್ರೀಮತಿ). ಎನ್. ಸಿ. ಪಾಟೀಲ, ಸಿಂಡಿಕೇಟ ಸದಸ್ಯರು ಇವರು ಪ್ರೊ. ಶಿ.ಶಿ. ಬಸವನಾಳ ಅವರ ಜೀವನ ಸಾಧನೆ ಕುರಿತು ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ & ಸ್ನಾತಕೋತ್ತರ ಪಠ್ಯಕ್ರಮದಲ್ಲಿ ಅಳವಡಿಸುವಂತೆ ಸಲ್ಲಿಸಿದ ಪ್ರಸ್ತಾವನೆಯ ಕುರಿತು. |
| | **ನಿರ್ಣಯ** | ಡಾ(ಶ್ರೀಮತಿ). ಎನ್. ಸಿ. ಪಾಟೀಲ, ಸಿಂಡಿಕೇಟ ಸದಸ್ಯರು ಇವರು ಪ್ರೊ. ಶಿ.ಶಿ. ಬಸವನಾಳ ಅವರ ಜೀವನ ಸಾಧನೆ ಕುರಿತು ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ & ಸ್ನಾತಕೋತ್ತರ ಪಠ್ಯಕ್ರಮದಲ್ಲಿ ಅಳವಡಿಸುವಂತೆ ಸಲ್ಲಿಸಿದ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಕನ್ನಡ ವಿಷಯದ ಅಭ್ಯಾಸ ಸೂಚಿ ಮಂಡಳಿಗೆ ಮಂಡಿಸುವಂತೆ ಸಿಂಡಿಕೇಟ್ ಸಭೆಯು ಅನುಮೋದಿಸಿತು. |



**ಕುಲಸಚಿವರು** **ಕುಲಪತಿಗಳು**

| | | ಶ್ರೀ. ರಾಬರ್ಟ ದದ್ದಾಪುರಿ, ಸಿಂಡಿಕೇಟ ಸದಸ್ಯರು ಮಂಡಿಸಿದ ಪ್ರಸ್ತಾವನೆಗಳು |
|---|---|---|
| 17) | ವಿಷಯ | ಪ್ರೊ. ಕೆ.ಎಮ್. ಹೊಸಮನಿ, ನಿವೃತ್ತ ಪ್ರಾಧ್ಯಾಪಕರು ಇವರ ಮೇಲಿನ ಆಪಾಧನೆ ಕುರಿತು. |
| | ನಿರ್ಣಯ | ಪ್ರೊ. ಕೆ.ಎಮ್. ಹೊಸಮನಿ, ನಿವೃತ್ತ ಪ್ರಾಧ್ಯಾಪಕರು ಇವರ ಮೇಲಿನ ಆಪಾಧನೆ ಕುರಿತು ಕುಲಂಕೂಷವಾಗಿ ಪರಿಶೀಲಿಸಿ ವರದಿಯನ್ನು ನೀಡಲು ಈ ಕೆಳಕಂಡ ಸಮಿತಿಯನ್ನು ರಚಿಸಲು ಸಿಂಡಿಕೇಟ ಸಭೆಯು ಅನುಮೋದಿಸಿತು. |

| ಅ.ನಂ. | ಹುದ್ದೆ | ಪದನಾಮ |
|---|---|---|
| 1) | ಶ್ರೀ. ರಾಬರ್ಟ್ ದದ್ದಾಪುರಿ, ಸಿಂಡಿಕೇಟ ಸದಸ್ಯರು | ಅಧ್ಯಕ್ಷರು |
| 2) | ಡಾ. ಎಮ್. ಎನ್. ಮೀರಾನಾಯಕ, ಕವಿವಿಯ ಮಾಜಿ ಸಿಂಡಿಕೇಟ ಸದಸ್ಯರು, | ಸದಸ್ಯರು |
| 3) | ಶ್ರೀಮತಿ. ರತ್ನಾ ಪಾಟೀಲ, ಸಿಂಡಿಕೇಟ ಸದಸ್ಯರು | ಸದಸ್ಯರು |
| 4) | ಉಪ ಕುಲಸಚಿವರು, ಸಿಆಸು ವಿಭಾಗ | ಸಂಚಾಲಕರು |

| | | |
|---|---|---|
| 18) | ವಿಷಯ | ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯಗಳ ಪ್ರಾಚಾರ್ಯರ ನೇಮಕ ಮಾಡುವ ಬಗ್ಗೆ ರಚಿಸಿದ ಸಮಿತಿಯ ವರದಿಯ ಕುರಿತು. |
| | ನಿರ್ಣಯ | ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯಗಳ ಪ್ರಾಚಾರ್ಯರ ನೇಮಕ ಮಾಡುವ ಕುರಿತು ಪ್ರೊ. ಎಮ್. ವಿಶ್ವನಾಥ ಇವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಗೆ ಕೂಡಲೇ ವರದಿ ಸಲ್ಲಿಸುವಂತೆ ಪತ್ರ ಬರೆಯಲು ಸಿಂಡಿಕೇಟ ಅನುಮೋದಿಸಿತು. |
| 19) | ವಿಷಯ | Oxford College ಹುಬ್ಬಳ್ಳಿ ಮಹಾವಿದ್ಯಾಲಯದ ಭದ್ರುತಾ ಠೇವಣಿಯಿಂದ GST ಕಟಾವುಗೊಳಿಸಿರುವ ಬಗ್ಗೆ. |
| | ನಿರ್ಣಯ | Oxford College ಹುಬ್ಬಳ್ಳಿ ಮಹಾವಿದ್ಯಾಲಯದ ಭದ್ರುತಾ ಠೇವಣಿಯಿಂದ GST ಕಟಾವುಗೊಳಿಸಿರುವ ಬಗ್ಗೆ ಚರ್ಚಿಸಲಾಗಿ ಭದ್ರುತಾ ಠೇವಣಿಯಿಂದ GST ಕಟಾವುಗೊಳಿಸುವುದು ಬೇಡ, ಸದರಿ ಮಹಾವಿದ್ಯಾಲಯಕ್ಕೆ ಪತ್ರ ಬರೆದು GST ಪಾವತಿಸಲು ತಿಳಿಸುವುದು ಹಾಗಯೇ ಇತರೇ ಮಹಾವಿದ್ಯಾಲಯಗಳಿಗೂ ಕೂಡ ಪತ್ರ ಬರೆದು ತಿಳಿಸಲು ನಿರ್ಣಯಿಸಿತು. |
| 20) | ವಿಷಯ | ಸಿಂಡಿಕೇಟ ಸದಸ್ಯರುಗಳಾದ ಶ್ರೀ, ರಾಬರ್ಟ್ ದದ್ದಾಪುರಿ ಹಾಗೂ ಶ್ರೀ ಮಹೇಶ ಹಲೇನ್ನವರ ಇವರುಗಳು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರ ಬಗ್ಗೆ ಶ್ರೀಮತಿ. ಅಂಜನಾ ಎಸ್. ಬಸನಗೌಡರ, ಸಿಂಡಿಕೇಟ ಸದಸ್ಯರು ಇವರು ಸಲ್ಲಿಸಿದ ವರದಿಯ ಬಗ್ಗೆ. |
| | ನಿರ್ಣಯ | ಸಿಂಡಿಕೇಟ ಸದಸ್ಯರುಗಳಾದ ಶ್ರೀ, ರಾಬರ್ಟ್ ದದ್ದಾಪುರಿ ಹಾಗೂ ಶ್ರೀ ಮಹೇಶ ಹಲೇನ್ನವರ ಇವರುಗಳು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರ ಬಗ್ಗೆ ಶ್ರೀಮತಿ. ಅಂಜನಾ ಎಸ್. ಬಸನಗೌಡರ, ಸಿಂಡಿಕೇಟ ಸದಸ್ಯರು ಇವರು ಸಲ್ಲಿಸಿದ ವರದಿಯ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಚರ್ಚಿಸಲಾಗಿ, ಈ ವಿಷಯಕ್ಕೆ ಸಂಬಂಧಿಸಿದಂತೆ ಕುಲಪತಿಗಳು ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಭೆಗೆ ತಿಳಿಸಲಾಯಿತು. |
| 21) | ವಿಷಯ | ಸಿಂಡಿಕೇಟ ಸದಸ್ಯರಾದ ಶ್ರೀ, ರಾಬರ್ಟ್ ದದ್ದಾಪುರಿ ಇವರು ಕಾನೂನು ಮಹಾವಿದ್ಯಾಲಯದಲ್ಲಿ ಡಾ. ರಾಕೇಶಕುಮಾರ ಕಾಂಬಳೆ, ಸಹಾಯಕ ಪ್ರಾಧ್ಯಾಪಕರು ಇವರು ವಿದ್ಯಾರ್ಥಿಗಳಿಗೆ ಮತ್ತು ಪ್ರಾಚಾರ್ಯರಿಗೆ ನೀಡುತ್ತಿರುವ ಕಿರುಕುಳದ ಕುರಿತು ಪ್ರಾಚಾರ್ಯರು ನೀಡಲಾದ ದೂರಿನ ಹಿನ್ನಲೆಯಲ್ಲಿ ತೆಗೆದುಕೊಂಡ ಕ್ರಮದ ಕುರಿತು ಪ್ರಸ್ತಾವನೆ. |
| | ನಿರ್ಣಯ | ಸಿಂಡಿಕೇಟ ಸದಸ್ಯರಾದ ಶ್ರೀ, ರಾಬರ್ಟ್ ದದ್ದಾಪುರಿ ಇವರು ಕಾನೂನು ಮಹಾವಿದ್ಯಾಲಯದಲ್ಲಿ ಡಾ. ರಾಕೇಶಕುಮಾರ ಕಾಂಬಳೆ, ಸಹಾಯಕ ಪ್ರಾಧ್ಯಾಪಕರು ಇವರು ವಿದ್ಯಾರ್ಥಿಗಳಿಗೆ ಮತ್ತು ಪ್ರಾಚಾರ್ಯರಿಗೆ ನೀಡುತ್ತಿರುವ ಕಿರುಕುಳದ ಕುರಿತು ಪ್ರಾಚಾರ್ಯರು ನೀಡಲಾದ ದೂರಿನ ಹಿನ್ನಲೆಯಲ್ಲಿ ತೆಗೆದುಕೊಂಡ ಕ್ರಮದ ಕುರಿತು ಚರ್ಚಿಸಲಾಗಿ ಈ ಬಗ್ಗೆ ಈಗಾಗಲೇ ಪ್ರಾಚಾರ್ಯರು |



ಕುಲಸಚಿವರು

ಕುಲಪತಿಗಳು

| | | |
|---|---|---|
| | | ದೂರು ಕೊಟ್ಟಿರುವುದನ್ನು ICC ಸಮಿತಿಗೆ ವಹಿಸಲಾಗಿದೆ. ಸದರಿ ಸಮಿತಿಯ ವರದಿ ಆದರಿಸಿ ತನಿಖೆ ನಡೆಸಲಾಗುವುದೆಂದು ಸಭೆಯ ಗಮನಕ್ಕೆ ತರಲಾಯಿತು. |
| **22)** | ವಿಷಯ | ಕಾನೂನು ಮಹಾವಿದ್ಯಾಲಯದಲ್ಲಿ ಡಾ. ರಾಕೇಶಕುಮಾರ ಕಾಂಬಳೆ, ಸಹಾಯಕ ಪ್ರಾಧ್ಯಾಪಕರು ಇವರು ಸ್ನಾತಕ ಪದವಿಯ ಆಂತರಿಕ ಮೌಲ್ಯಮಾಪನದಲ್ಲಿ ಅವರ ಸಂಬಂಧಿಕರಿಗೆ ಆಂತರಿಕ ಅಂಕಗಳನ್ನು ನೀಡಿದ್ದರ ಕುರಿತು ಮತ್ತು ಕಾನೂನು ವಿದ್ಯಾರ್ಥಿಗಳ ಸಂಘ, ಈ ಹಿಂದೆ ಈಗಾಗಲೇ ಕವಿವಿಗೆ ಲಿಖಿತ ದೂರನ್ನು ನೀಡಿದ್ದರೂ ಸಹ ಅಧ್ಯಕ್ಷರಿಗೆ ಪುನಃ ಪತ್ರ ಬರೆದಿದ್ದರ ಕುರಿತು. |
| | **ನಿರ್ಣಯ** | ಕಾನೂನು ಮಹಾವಿದ್ಯಾಲಯದಲ್ಲಿ ಡಾ. ರಾಕೇಶಕುಮಾರ ಕಾಂಬಳೆ, ಸಹಾಯಕ ಪ್ರಾಧ್ಯಾಪಕರು ಇವರು ಸ್ನಾತಕ ಪದವಿಯ ಆಂತರಿಕ ಮೌಲ್ಯಮಾಪನದಲ್ಲಿ ಅವರ ಸಂಬಂಧಿಕರಿಗೆ ಆಂತರಿಕ ಅಂಕಗಳನ್ನು ನೀಡಿದ್ದನ್ನು ಒಪ್ಪಿಕೊಂಡು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪತ್ರ ಬರೆದಿದ್ದು ಇದ್ದು, ಈ ಪ್ರಕರಣದಲ್ಲಿ ಪರೀಕ್ಷಾ ವಿಭಾಗದ ಕುಲಸಚಿವರು (ಮೌಲ್ಯಮಾಪನ), ಉಪ ಕುಲಸಚಿವರು ಮತ್ತು ಸಂಬಂಧಿಸಿದ ವಿಭಾಗದ ಅಧೀಕ್ಷರ ಅನುಮತಿ ಇಲ್ಲದೇ ನೇರವಾಗಿ ಕಾನೂನು ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಿಗೆ ಪುನಃ ಪತ್ರ ಬರೆದಿದ್ದನ್ನು ಸಭೆಯಲ್ಲಿ ಪ್ರಸ್ತಾಪಿಸಲಾಯಿತು, ಸಭೆಯು ಈ ಕುರಿತು ಪರಿಶೀಲಿಸುವುದಾಗಿ ಹಾಗೂ ಅಗತ್ಯಕ್ರಮ ಕೈಗೊಳ್ಳಲು ಕುಲಸಚಿವರು (ಮೌಲ್ಯಮಾಪನ) ಇವರಿಗೆ ತಿಳಿಸಲು ಸಭೆಯು ತೀರ್ಮಾನಿಸಿತು. |
| **23)** | ವಿಷಯ | "ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತ ಕಟ್ಟಡದ ಆವರಣದಲ್ಲಿ ಹಲವಾರು ಸಂಘಟನೆಗಳು /ಶಿಕ್ಷಕರ ಸಂಘಟನೆಗಳು/ ವಿದ್ಯಾರ್ಥಿ ಸಂಘಟನೆಗಳು/ ಶಿಕ್ಷಕೇತರ ಸಂಘಟನೆಗಳು/ ಕಾರ್ಮಿಕ ಸಂಘಟನೆಗಳು ವಿವಿಧ ಬೇಡಿಕೆಗಳಿಗಾಗಿ ಧರಣಿಯನ್ನು ವಿಶ್ವವಿದ್ಯಾಲಯದ ಆಡಳಿತ ಕಛೇರಿಯ ಎದುರುಗಡೆ ಕೈಗೊಳ್ಳುತ್ತಿರುವುದರಿಂದ ದಿನನಿತ್ಯದ ಕಛೇರಿ ಕೆಲಸಕ್ಕೆ ಅಡಚಣೆ ಉಂಟಾಗುತ್ತದೆ, ವಿದ್ಯಾಸೌಧದಲ್ಲಿಯ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಸಮುದಾಯಕ್ಕೆ, ಸಂಶೋಧನಾ ವಿದ್ಯಾರ್ಥಿಗಳಿಗೆ, ವಿಜ್ಞಾನ ವಿಷಯದಲ್ಲಿ ಪ್ರಯೋಗ ನಿರತ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ, ಪರ ಊರಿನಿಂದ ಬರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ, ಗ್ರಂಥಾಲಯದಲ್ಲಿ ಅಧ್ಯಯನಶೀಲರಾಗಿರುವ ವಿದ್ಯಾರ್ಥಿ ಸಮುದಾಯಕ್ಕೆ ಅತೀವ ತೊಂದರೆಯಾಗುತ್ತಿರುವ ವಿಷಯದ ಕುರಿತು ಚರ್ಚಿಸುವುದು |
| | **ನಿರ್ಣಯ** | ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿ ದಿನಾಂಕ 12-13 ಮೇ 2025 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಈಗಾಗಲೇ ನಿರ್ಣಯ ಕೈಗೊಂಡಂತೆ ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತ ಕಟ್ಟಡದ ಎದುರುಗಡೆ "ಶಬ್ದ ಮುಕ್ತ ವಲಯ" ಎಂಬ ಫಲಕವನ್ನು ಅಳವಡಿಸಲಾಗಿದೆ. ಸದರಿ ಸಭೆಯ ನಿರ್ಣಯದಂತೆ ಈಗಾಗಲೇ ಸುತ್ತೋಲೆ ಹೊರಡಿಸಲಾಗಿದ್ದು, ವಿಶ್ವವಿದ್ಯಾಲಯದ ಎಲ್ಲ ವಿಭಾಗಗಳಿಗೆ ಪುನಃ ಸುತ್ತೋಲೆಯನ್ನು ಹೊರಡಿಸುವಂತೆ ಸಭೆಯು ತೀರ್ಮಾನಿಸಿತು. |
| **24)** | ವಿಷಯ | ಶ್ರೀ. ಶ್ಯಾಮ್ ಮಲ್ಲನಗೌಡರ, ಸಿಂಡಿಕೇಟ ಸದಸ್ಯರು ಇವರು ಬಸವ ಪೀಠದ ಸಂಯೋಜಕರ ನೇಮಕಾತಿಯಲ್ಲಿ ಆದ ಅಡತಡೆಗಳ ವಿಷಯದ ಕುರಿತು. |
| | **ನಿರ್ಣಯ** | ಬಸವ ಪೀಠದ ಸಂಯೋಜಕರ ನೇಮಕಾತಿಯಲ್ಲಿ ಆದ ಅಡೆತಡೆಗಳ ಬಗ್ಗೆ ಮಾನ್ಯ ಕುಲಪತಿಯವರು ಸಭೆಯ ಗಮನಕ್ಕೆ ತಂದು ಈಗಾಗಲೇ ಬಸವ ಪೀಠದ ಪ್ರಭಾರವನ್ನು ಪ್ರೊ. ಎನ್. ವಾಯ್. ಮಟ್ಟಿಹಾಳ ಇವರಿಗೆ ನೀಡಿರುವ ಬಗ್ಗೆ ತಿಳಿಸಿದ್ದು, ಸಭೆಯು ಅನುಮೋದಿಸಿತು. |



**ಕುಲಸಚಿವರು**

**ಕುಲಪತಿಗಳು**